ಇ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿ ಸುತ್ತಿರುವ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಯ ವಿವರ ಹಾಗೂ ಕೊರತೆ ಬಗ್ಗೆ.

	ಪ್ರಾಥಮಿಕ ಶಾಲೆಗಳಲ್ಲಿ		ಪ್ರೌಢ ಶಾಲೆಗಳಲ್ಲಿ		ಶಿಕ್ಷಕೇತರರು	
	ಕಾ.ನಿ	ಕೊರತೆ	ಕಾ.ನಿ	ಕೊರತೆ	ಕಾ.ನಿ	ಕೊರತೆ
1. ಔರಾದ್	1131	60	123	52	53	15
2. ಭಾಲ್ಕಿ	725	66	124	37	49	14
3. ಬ.ಕಲ್ಯಾಣ	886	64	150	47	49	09
4. ಹುಲಸೂರು	593	91	73	37	25	10
5. ಬೀದರ್	1010	31	92	15	105	13
6. ಹುಮ್ನಾಬಾದ್	771	28	160	49	61	13
ಒಟ್ಟು	**5116**	**340**	**722**	**237**	**342**	**74**

ಕಾ.ನಿ. ಕಾರ್ಯ ನಿರ್ವಹಿಸುತ್ತಿರುವರು.

ಈ)1. ಕೊರತೆ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

2. 2003-2004ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಮುನ್ನಾ ಪ್ರೌಢಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

3. ಬೋಧಕೇತರ ಹುದ್ದೆಗಳ ಸೃಜನ ಮತ್ತು ನೇರ ನೇಮಕಾತಿಗಾಗಿ ಆರ್ಥಿಕ ನಿರ್ಭದವಿರುವುದರಿಂದ ಈ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಬಡ್ತಿಯ ಮೂಲಕ ತುಂಬುವ ಬಗ್ಗೆ ಮಾತ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಮತ್ತು ವಯಸ್ಕರ ಶಿಕ್ಷಣ ಯೋಜನೆ

1024 (1252) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್): ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯ ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಹಾಗೂ ವಯಸ್ಕರ ಶಿಕ್ಷಣ ಯೋಜನೆಗಳು ಯಾವ ಹಂತದಲ್ಲಿವೆ; ಕಳೆದ ಮೂರುವರೆ ವರ್ಷಗಳಲ್ಲಿ ಈ ಯೋಜನೆಗಳು ಜಿಲ್ಲೆಯಲ್ಲಿ ಯಾವ ಮಟ್ಟಿಗೆ ಪ್ರಗತಿಯನ್ನು ಸಾಧಿಸಿವೆ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು;)

ಆ) ಈ ಮೇಲ್ಕಂಡ ಯೋಜನೆಗಳಿಗೆ? ಅಗತ್ಯವಾಗಿರುವ ಸಾಮಾನು ಸಲಕರಣೆಗಳು/ ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು ಯಾರಿಂದ ಖರೀದಿ ಮಾಡಲಾಗುತ್ತಿದೆ; ಈ ಖರೀದಿಯಲ್ಲಿ ತೀವ್ರವಾದ ಭ್ರಷ್ಟಾಚಾರವು ಪತ್ತೆಯಾಗಿರುವುದು; ನಿಜವಲ್ಲವೇ;

ಈ ವಿಷಯದ ಬಗ್ಗೆ ಸರ್ಕಾರವು ತನಿಖೆಗೆ ಆದೇಶಿಸುತ್ತದೆಯೇ?

ಇ) ಈ ಯೋಜನೆಗೆ ಸಂಬಂಧಪಟ್ಟಂತೆ ಎಷ್ಟು ಮೊತ್ತದ ಹಣವನ್ನು ಎಷ್ಟು ಅವಧಿಗೆ ಜಿಲ್ಲೆಯ ಯಾವ ಯಾವ ಬ್ಯಾಂಕ್‌ಗಳಲ್ಲಿ ತೊಡಗಿಸಲಾಗಿದೆ; ಈ ಹಣವನ್ನು ಮೊದಲು ಜಿಲ್ಲಾ

ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ತೊಡಗಿಸಿದ್ದು, ಅನಂತರ ವಾಪಸ್ಸು ಪಡೆದು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೊಡಗಿಸುತ್ತಿರಲು ಕಾರಣಗಳೇನು?

ರಾಜ್ಯ ಸರ್ಕಾರವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಹಣವನ್ನು ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ತೊಡಗಿಸುವ ಬಗ್ಗೆ ಕ್ರಮ ಕೈಗೊಳ್ಳುವುದೆ; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ ಗ್ರಂಥಾಲಯ ಮತ್ತು ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ)1) ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಸಮಿತಿಯಿಂದ ಸಾಕ್ಷರತಾ ಆಂದೋಲನ, ಸಾಕ್ಷರೋತ್ತರ ಕಾರ್ಯಕ್ರಮಗಳು ನಡೆದು ಮುಕ್ತಾಯಗೊಂಡಿವೆ. ಈಗ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ 2000-2001ರಿಂದ ಜಾರಿಯಲ್ಲಿದ್ದು, ಜಿಲ್ಲೆಯಲ್ಲಿ 57 ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳು 571 ಮುಂದುವರಿಕೆ ಶಿಕ್ಷಣ ಕೇಂದ್ರಗಳು ಪ್ರಾರಂಭಗೊಂಡಿದೆ, 628 ಕೇಂದ್ರಗಳಲ್ಲಿ ಸುಮಾರು ಒಂದು ಲಕ್ಷ ಐವತ್ತು ಸಾವಿರದಷ್ಟು ಜನರು ಪ್ರಯೋಜನ ಪಡೆಯುತ್ತಿದ್ದಾರೆ. ತಾಲ್ಲೂಕುವಾರು ಕೇಂದ್ರಗಳ ವಿವರ ಈ ಕೆಳಗಿನಂತೆ ಇದೆ.

ತಾಲ್ಲೂಕು	ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳು	ಮುಂದುವರಿಕೆ ಶಿಕ್ಷಣ ಕೇಂದ್ರಗಳು
ಔರಾದ್	12	120
ಬಸವಕಲ್ಯಾಣ	12	120
ಬೀದರ್	13	131
ಬಾಲ್ಕಿ	10	100
ಹುಮನಾಬಾದ್	10	100
ಒಟ್ಟು	57	571 = 628

ಹುಲಸೂರ್ ವಿಧಾನಸಭಾ ಕ್ಷೇತ್ರದಲ್ಲಿ 7 ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳು 105 ಮುಂದುವರಿಕೆ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಲಿವೆ.

2) ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು

3) ಬೀದರ್ ಮತ್ತು ಔರಾದ್ ತಾಲ್ಲೂಕುಗಳಲ್ಲಿ ಒಟ್ಟು 37 ಜನ ಶಿಕ್ಷಣ ನಿಲಯಗಳು ಕಾರ್ಯನಿರ್ವಹಿಸುತ್ತಲಿವೆ.

ಆ) ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳು ಮತ್ತು ಮುಂದುವರಿಕೆ ಶಿಕ್ಷಣ ಕೇಂದ್ರಗಳಿಗೆ ಪೀಠೋಪಕರಣ ಮತ್ತು ಸಾಮಗ್ರಿಗಳನ್ನುತ್ತ ಗ್ರಾಮ ಅಭಿವೃದ್ಧಿ/ ಗ್ರಾಮ ಸಾಕ್ಷರತಾ ಸಮಿತಿಯವರು ಬೀದರ್ ಜಿಲ್ಲಾ ಸರಬರಾಜು ಮತ್ತು ಮಾರಾಟ ಕೈಗಾರಿಕಾ ಸಹಕಾರ ಸಂಘ ನಿಯಮಿತ ಬೀದರ್‌ದಿಂದ ಖರೀದಿಸಿರುತ್ತಾರೆ.

- ಖರೀದಿಸಲಾದ ಸಾಮಗ್ರಿಗಳು ಕಳಪೆ ಗುಣಮಟ್ಟದ್ದಾಗಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.
- ಜಿಲ್ಲಾ ಸಾಕ್ಷರತಾ ಸಮಿತಿಯ ವರದಿಯ ಪ್ರಕಾರ ಮುಂದುವರಿಕೆ ಶಿಕ್ಷಣ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಇರುವ ನೋಡಲ್

ಮತ್ತು ಮುಂದುವರಿಕೆ ಶಿಕ್ಷಣ ಕೇಂದ್ರಗಳಿಗೆ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘದವರಿಂದ ಪೀಠೋಪಕರಣ ಮತ್ತು ಸಾಮಗ್ರಿಗಳನ್ನು ಸರಬಾರಜು ಮಾಡಿರುತ್ತಾರೆ.

- ಸರಬರಾಜು ಮಾಡುವ ಮುಂಚೆ ಜಿಲ್ಲಸಾಕ್ಷರತಾ ಸಮಿತಿಯು ಸಾಮಗ್ರಿಗಳಗುಣಮಟ್ಟದ ಪರಿಶೀಲನೆ ನಡೆಸಿ ಅದೇ ಗುಣಮಟ್ಟದ ಕಂಪನಿಯ ಸಾಮಗ್ರಿಗಳನ್ನು ಪೂರೈಸಲು ಸೂಚಿಸಿತು.
- ಜಿಲ್ಲಾ ಸಮಿತಿಯವರು ಗ್ರಾಮಾಭಿವೃದ್ಧಿ ಸಮಿತಿಯವರ ಸಾಮಗ್ರಿಗಳನ್ನು ಪರಿಶೀಲಿಸಿದಾಗ ಸರಬರಾಜಾದ ಕೆಲವೊಂದು ಸಾಮಗ್ರಿಗಳ ಗುಣಮಟ್ಟ ಸರಿಯಲ್ಲವೆಂದು ಕಂಡುಬಂದಿತ್ತು.
- ಈ ವಿಷಯವನ್ನು ಜಿಲ್ಲಾ ಸಾಕ್ಷರತಾ ಸಮಿತಿಕಾರ್ಯಕಾರಿ ಸಭೆಯ ಮುಂದೆ ಇಟ್ಟಿತು. ಸಮಿತಿಯು ಸದರಿ ಸರಬರಾಜು ಮಾಡಿದ ಡಿ ಎಸ್ ಎಂ ಎಸ್ ನವರಿಗೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ನೋಟೀಸು ನೀಡಿದೆ.
- ಎಲ್ಲಾ ಸ್ಟೀಲ್ ಸಾಮಗ್ರಿಗಳ ಮೇಲೆ ಅನ್ವಯಿಸುವಂತೆ ಗೇಜಿನ ಆಧಾರದ ಮೇಲೆ ಬೆಲೆಯನ್ನು ಕಡಿತಗೊಳಿಸುವುದು.
- ಅಂತಹ ಸರಬರಾಜುದಾರರೊಂದಿಗೆ ಸೂಕ್ತ ದಂಡ ವಿಧಿಸುವುದು ಹಾಗೂ ಕಪ್ಪು ಪಟ್ಟಿಯಲ್ಲಿ ಸೇರಿಸುವುದು.
- ಸೈಕಲ್ ಟ್ಯಯರು-ಟ್ಯೂಬ್ ಗಳನ್ನು ದೂರು ಬಂದ ಕೇಂದ್ರಗಳಿಗೆ ಬದಲಾಯಿಸಿ ಕೊಡುವುದು.
- ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದಂತೆ ಸದರಿ ಸಂಘದವರು ಡಿ.ಎಸ್.ಎಂ.ಎಸ್ವ ಈ ರೀತಿಯಿಂದ ಸರಬರಾಜುದಾರರ ಮೇಲೆ ಈ ಕ್ರಮ ಕೈಗೊಂಡರು.
- ಈ ವಿಷಯಕ್ಕೆ ಕುರಿತಂತೆ ಟಿಪ್ಪಣಿಯಲ್ಲಿ ವಿವರಿಸಲಾಗಿದೆ.
- ಕಾರ್ಯಕಾರಿ ಸಮತಿಯು ತೀರ್ಮಾನಿಸಿದಂತೆ ಸದರಿ ಸಂಘದವರು ಡಿ ಎಸ್ ಎಂ ಎಸ್ ವು ಈ ರೀತಿಯಿಂದ ಸರಬರಾಜುದಾರರ ಮೇಲೆ ಈ ಕ್ರಮ ಕೈಗೊಂಡರು.
- ಸಾಮಗ್ರಿಗಳಿಗೆ ಅನ್ವಯಿಸಿದಂತೆ ಗೇಜಿನ ಆಧಾರದ ಮೇಲೆ ಬೆಲೆಯನ್ನು ಮರು ನಿಗದಿಪಡಿಸಿರುತ್ತಾರೆ.
- ದೂರು ಬಂದ ಕಡೆಗಳಿಂದ ಟೈರ್-ಟ್ಯೂಬ್ ಇತರೆ ಸಾಮಗ್ರಿಗಳನ್ನು ಬದಲಾಹಿಸಿದ್ದಾರೆ.
- ಸ್ಟೀಲ್ ಸಾಮಗ್ರಿಗಳನ್ನು ಸರಬರಾಜು ಮಾಡಿದ ಕರ್ನಾಟಕ ಮೆಟಲ್ ವರ್ಕ್ಸ್ ಹಾಗೂ ಎಸ್.ಎಲ್.ವಿ ಇಂಡಸ್ಟ್ರೀಸ್ ಬೀದರ್ ಮತ್ತ ರೇವಣ ಸಿದ್ದೇಶ್ವರ ಇಂಡಸ್ಟ್ರೀಸ್, ಹುಮನಾಬಾದ್ ಈ ಕಾರ್ಖಾನೆಗಳನ್ನು ಕಪ್ಪುಪಟ್ಟಿಯಲ್ಲಿ ಸೇರಿಸಿರುತ್ತಾರೆ.
- ಈ ಸಾಮಗ್ರಿಗಳು ಈಗಾಗಲೇ ಗ್ರಾಮ ಮಟ್ಟಕ್ಕೆ ತಲುಪಿದ್ದು, ಸಾಮಗ್ರಿಗಳನ್ನು ಪರಿಶೀಲಿಸಿ ದೃಢೀಕರಿಸಿದ ನಂತರವೇ ಸಾಮಗ್ರಿ ಸರಬರಾಜುದಾರರಿಗೆ ಚೆಕ್ಕು ನೀಡುತ್ತಿರುವರು.
- ಈ ವಿಷಯದ ಬಗ್ಗೆ ತನಿಖೆಗಾಗಿ ಸರ್ಕಾರವು ಆದೇಶ ನೀಡಿರುತ್ತದೆ.

೫) ಈ ಯೋಜನೆಗೆ ಸಂಬಂಧಪಟ್ಟಂತೆ ಬಿಡುಗಡೆಯಾದ ಅನುದಾನ ರೂ.232 ಲಕ್ಷ ಹಣ ಬಿಡುಗಡೆಯಾಗಿದ್ದ ಈ ಹಣವನ್ನು ಆರು ತಿಂಗಳ ಅವಧಿಗೆ ಕೆನರಾ ಬ್ಯಾಂಕಿನಲ್ಲಿ ಎಫ್ ಡಿ ಆರ್ ಖಾತೆಯಲ್ಲಿ ತೊಡಗಿಸಲಾಗಿತು.

- ಸಾಕ್ಷರತಾ ಆಂದೋಲನ ಹಾಗೂ ಸಾಕ್ಷರೋತ್ತರ ಕಾರ್ಯಕ್ರಮಗಳ ಹಣವನ್ನು ಡಿ.ಸಿ.ಡಿ ಬ್ಯಾಂಕಿನಲ್ಲಿ ತೊಡಗಿಸಲಾಗಿತ್ತು. ಈ ಕಾರ್ಯಕ್ರಮಗಳು ಮುಕ್ತಾಯ ಗೊಂಡಿದ್ದು, ಉಳಿದಿರುವ ಹಣವನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಗೆ ನಿಯಮಾನುಸಾರ ಹಿಂದಿರುಗಿಸಲಾಗಿದೆ.
- ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ನವದೆಹಲಿ ಇವರ ಮಾರ್ಗಸೂಚಿಯಂತೆ ಈ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತೊಡಗಿಸಬೇಕಾದುದರಿಂದ ಇದನ್ನು ಬೀದರಿನ ಕೆನರಾ ಬ್ಯಾಂಕಿನಲ್ಲಿ ಹಣ ತೊಡಗಿಸಲಾಗಿದೆ.

ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಹಣಕಾಸು ವಿವರ

1027 (1256) ಶ್ರೀ ರಾಮದಾಸ್ ಎ. (ಕೃಷ್ಣರಾಜ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರ ವತಿಯಿಂದ ಕಳೆದ 3 ವರ್ಷಗಳಿಂದ ಯಾವ ಯಾವ ದಿನಾಂಕಗಳಿಂದ ಯಾವ ದಿನಾಂಕಗಳವರೆಗೂ ವಸ್ತು ಪ್ರದರ್ಶನ ಏಪಡಿಸಲಾಗಿತ್ತು?

ಆ) ವಸ್ತು ಪ್ರದರ್ಶನದಿಂದ ನಿರೀಕ್ಷಿಸಲಾಗಿದ್ದ ಮೊತ್ತ ಎಷ್ಟು? ವಸೂಲಾದ ಹಣವೆಷ್ಟು?

ಇ) ಟೆಂಡರ್ ಆಧಾರದ ಮೇಲೆ ವಸ್ತು ಪ್ರದರ್ಶನ ಪ್ರಾಧಿಕಾರವನ್ನು ಯಾರಿಗೆ ಎಷ್ಟು ಮೊತ್ತಕ್ಕೆ ನೀಡಲಾಗಿತ್ತು; ಅದರಿಂದ ವಸೂಲಾದ ಹಣವೆಷ್ಟು; ಬಾಕಿ ಇದ್ದಲ್ಲಿ, ವಸೂಲು ಮಾಡಲು ಕೈಗೊಂಡ ಕ್ರಮಗಳೇನು?

ಈ) ಮಳಿಗೆಗಳ ಹರಾಜಿನಿಂದ ಮತ್ತು ಪ್ರವೇಶ ಶುಲ್ಕದಿಂದ ವಸೂಲಾದ ಹಣದ ವಿವರ ನೀಡುವುದು.

ಉ) ಕಳೆದ 3 ವರ್ಷಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ? ಅವುಗಳಿಗೆ ತಗುಲಿರುವ ಹಣವೆಷ್ಟು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 2000 - 29.09.2000 ರಿಂದ 07.01.2001
2001 - 17.10.2001 ರಿಂದ 15.01.2002
2002 - 09.10.2002 ರಿಂದ 19.01.2003

(ರೂ.ಲಕ್ಷಗಳಲ್ಲಿ)

	ವರ್ಷ	ನಿರೀಕ್ಷಿತ ಮೊತ್ತ (ರೂ.)	ವಸೂಲಾದ ಮೊತ್ತ (ರೂ.)
	2000	80.00	77.460
	2001	135.01	57.247
	2002	174.65	85.799

ಇ) ಟೆಂಡರ್ ಮೂಲಕ ಶ್ರೀ ಎಸ್. ಚಂದ್ರಶೇಖರ್, ಮೆ: ಚಂದ್ರು ಅಸೋಸಿಯೇಟ್ಸ್, ಮೈಸೂರು ಇವರಿಗೆ ರೂ.1.35 ಕೋಟಿಗಳಿಗೆ ಗುತ್ತಿಗೆ ನೀಡಲಾಗಿತ್ತು.

ವಸೂಲಾದ ಹಣ ರೂ.57,24,739/- ಬಾಕಿ ವಸೂಲಾತಿಗಾಗಿ ನಗರದ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ.